ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 :** **ಜೂನ್ 12, 2020**

# ಪತ್ರಿಕಾ ಪ್ರಕಟಣೆ

## ಹೆಚ್. ಡಿ. ದೇವೇಗೌಡ, ಎಂ. ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕರ್ನಾಟಕದಿಂದ ರಾಜ್ಯಸಭೆಗೆ ನಾಲ್ವರ ಅವಿರೋಧ ಆಯ್ಕೆ

**ಬೆಂಗಳೂರು, ಜೂನ್ 12 ( ಕರ್ನಾಟಕ ವಾರ್ತೆ ) :**

ಕರ್ನಾಟಕದಿಂದ ತೆರವಾಗಿರುವ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಜಾತ್ಯಾತೀತ ಜನತಾ ದಳದ ಹೆಚ್. ಡಿ. ದೇವೇಗೌಡ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಎಂ. ಮಲ್ಲಿಕಾರ್ಜುನ ಖರ್ಗೆ, ಭಾರತೀಯ ಜನತಾ ಪಕ್ಷದ ಈರಣ್ಣ ಕಡಾಡಿ ಮತ್ತು ಅಶೋಕ ಗಸ್ತಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಕರ್ನಾಟಕ ವಿಧಾನ ಸಭೆಯ ಕಾರ್ಯದರ್ಶಿ ಎಂ. ಕೆ. ವಿಶಾಲಾಕ್ಷಿ ಅವರು ಇಲ್ಲಿ ಇಂದು ಪ್ರಕಟಿಸಿದ್ದಾರೆ.

## <u>ಭ್ರಷ್ಟಾಚಾರ ಆರೋಪಿತ 2 ಅಧಿಕಾರಿಗಳ ವಿರುದ್ಧ ದಾಳಿ</u>

## <u>ಇಂದು ರಾಜ್ಯಾದ್ಯಂತ 6 ಸ್ಥಳಗಳಲ್ಲಿ ವಿವಿಧ ಎಸಿಬಿ ತಂಡಗಳಿಂದ ಕಾರ್ಯಾಚರಣೆ</u>

**ಬೆಂಗಳೂರು, ಜೂನ್ 12 (ಕರ್ನಾಟಕ ವಾರ್ತೆ)**

ದಿನಾಂಕ: 12.06.2020 ರಂದು ರಾಜ್ಯದ **2 ವಿವಿಧ ಸರ್ಕಾರಿ ನೌಕರರು** ತಮ್ಮ ಬಲ್ಲ ಮೂಲಗಳಿಗಿಂತ ಹೆಚ್ಚು ಅಸಮತೋಲನ ಆಸ್ತಿ–ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ **6 ಸ್ಥಳಗಳ ಮೇಲೆ** ಇಂದು ಭ್ರಷ್ಟಾಚಾರ ನಿಗ್ರಹ ದಳ ದಾಳಿ ನಡೆಸಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡೆಸಲಾದ ಸ್ಥಳಗಳ ಹಾಗೂ ಸರ್ಕಾರಿ ಅಧಿಕಾರಿಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. **ಶ್ರೀ. ಹನಮಪ್ಪ ಅಂದಪ್ಪ ಪ್ರಭರಣ್ಣವರ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಬಾಗಲಕೋಟೆ.**

ಇವರ ಗದಗ ಜಿಲ್ಲೆ, ರಾಜೀವ ಗಾಂಧಿನಗರದಲ್ಲಿರುವ ವಾಸದ ಮನೆ, ಹಾಗೂ ಬಾಗಲಕೋಟೆಯ ರೋಟ್ರಿ ಕ್ಲಬ್ ಕ್ರಾಸ್ ಬಳಿಯಲ್ಲಿರುವ ಪ್ರಸ್ತುತ ವಾಸದ ಬಾಡಿಗೆ ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರ ಕಛೇರಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಬಾಗಲಕೋಟೆ.

2. **ಶ್ರೀ. ಎಂ. ದಾಸೇಗೌಡ, ವಿಶೇಷ ಭೂ ಸ್ವಾಧೀನಾಧಿಕಾರಿ, ಕೆ.ಐ.,ಎ.ಡಿ.ಬಿ, ಮಂಗಳೂರು.(ಹಾಲಿ ಅಮಾನತ್ತು)**
ಇವರ ಮಂಡ್ಯ ಜಿಲ್ಲೆ, ಕಾವೇರಿನಗರದಲ್ಲಿನ ನಿವಾಸ, ಹಾಗೂ ಸ್ನೇಹಿತರ ಮಂಡ್ಯ ಜಿಲ್ಲೆ, ಅಶೋಕ ನಗರದಲ್ಲಿನ ವಾಸದ ಮನೆ ಹಾಗೂ ಮಂಡ್ಯ ಜಿಲ್ಲೆ, ಚಾಮುಂಡೇಶ್ವರಿನಗರದಲ್ಲಿನ ವಾಸದ ಮನೆ.

ಕರ್ನಾಟಕ ರಾಜ್ಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ವಿವಿಧ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ಧ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ-ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಎಸಿಬಿ ದಾಳಿ

**ಬೆಂಗಳೂರು, ಜೂನ್ 12 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ಟೌನ್‌ನಲ್ಲಿ ವಾಸವಾಗಿರುವ ನಿವಾಸಿಯೊಬ್ಬರು ತಮ್ಮ ಮನೆಯ ಬಳಿ ಬೋರ್‌ವೆಲ್ ಕೊರೆಯಿಸಿ, ನೀರನ್ನು ಟ್ಯಾಂಕರ್‌ಗಳಿಗೆ ಲೋಡ್ ಮಾಡಲು (ವಾಣಿಜ್ಯ ಉದ್ದೇಶಕ್ಕಾಗಿ) ಬಳಸುತ್ತಿದ್ದು, ಕಮರ್ಷಿಯಲ್ ಎಲೆಕ್ಟ್ರಿಕ್ ಕನೆಕ್ಷನ್ ಪಡೆದುಕೊಂಡಿರುತ್ತಾರೆ. ಈಗ್ಗೆ 15 ದಿನಗಳ ಹಿಂದೆ ಗಾಳಿ ಮಳೆಯಿಂದಾಗಿ ವಿದ್ಯುತ್ ಮೀಟರ್ ಶಾರ್ಟ್ ಸರ್ಕ್ಯೂಟ್ ಆಗಿ ಕರೆಂಟ್ ಸಂಪರ್ಕ ಕಡಿತಗೊಂಡಿದ್ದು, ಪಿರ್ಯಾದುದಾರರು ಕಂಬದಿಂದ ಕರೆಂಟ್ ಕನೆಕ್ಷನ್ ಪಡೆದುಕೊಂಡಿರುತ್ತಾರೆ. ಬೆಸ್ಕಾಂನ ಶ್ರೀ. ನಂಜುಂಡಸ್ವಾಮಿ, ಎ.ಇ ಹಾಗೂ ಶ್ರೀ. ರಾಜೇಶ್ ಎಂ. ಎಸ್, ಮೀಟರ್ ರೀಡರ್ ರವರು ಪಿರ್ಯಾದುದಾರರ ಮನೆಯ ಬಳಿ ಹೋಗಿ, ವಿದ್ಯುತ್ ಬಳಕೆ ಆಗುತ್ತಿರುವುದನ್ನು ವಿದ್ಯುತ್ ಮೀಟರ್ ರೀಡ್ ಮಾಡುತ್ತಿಲ್ಲವೆಂದು, ಅಕ್ರಮವಾಗಿ ಸಂಪರ್ಕ ಪಡೆದಿರುವುದಾಗಿ ಕೇಸು ದಾಖಲಿಸುವುದಾಗಿ ಪಿರ್ಯಾದುದಾರರ ಶ್ರೀಮತಿಯವರಿಗೆ ತಿಳಿಸಿ ಹೋಗಿದ್ದು, ಈ ಬಗ್ಗೆ ಪಿರ್ಯಾದುದಾರರು ಮೀಟರ್ ರೀಡರ್ ರವರ ಮೊಬೈಲ್‌ಗೆ ಕರೆ ಮಾಡಿ, ವಿಚಾರ ಮಾಡಿದ್ದು, ಮೀಟರ್ ಓಡದ ಕಾರಣ ಕಟ್ ಮಾಡಿರುವುದಾಗಿ ತಿಳಿಸಿರುತ್ತಾರೆ.

ಈ ಬಗ್ಗೆ ಎ.ಇ ನಂಜುಂಡಸ್ವಾಮಿ ರವರ ಮೊಬೈಲ್‌ಗೆ ಕರೆ ಮಾಡಿದಾಗ ರಾಜೇಶ್ ರವರನ್ನು ಕಳುಹಿಸಿಕೊಡುವುದಾಗಿ ಅವರೊಂದಿಗೆ ಮಾತನಾಡಲು ತಿಳಿಸಿರುತ್ತಾರೆ. ಮೀಟರ್ ರೀಡರ್ ರಾಜೇಶ್ ರವರು ಪಿರ್ಯಾದುದಾರರ ಮನೆಯ ಬಳ ಬಂದು ಕೇಸನ್ನು ದಾಖಲಿಸಿದರೆ ರೂ. 1,85,000/- ಗಳ ಫೈನ್ ಹಾಕುವುದಾಗಿ, ರೆವಿನ್ಯೂ ಸಕ್ಷನ್ ಎ.ಇ.ಇ ರವರ ಸೈನ್ ಆದರೆ ತೊಂದರೆಯಾಗುವುದಾಗಿ, ಕೇಸನ್ನು ಮಾಡದೆ ಇರಲು ಫೈನ್ ಮೊತ್ತದ ಅರ್ಧದಷ್ಟನ್ನು ಕೊಡುವಂತೆ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿದ್ದು, ಅಷ್ಟೊಂದು ಆಗುವುದಿಲ್ಲವೆಂದು ರೂ. 50,000/- ಕೊಡುವುದಾಗಿ ತಿಳಿಸಿದಾಗ ರೂ. 65,000/- ಕೊಡುವಂತೆ ತಿಳಿಸಿರುತ್ತಾರೆ

ಈ ಬಗ್ಗೆ ಎ. ಇ ನಂಜುಂಡಸ್ವಾಮಿ ರವರು ಮೀಟರ್ ರೀಡರ್ ರಾಜೇಶ್ ರವರ ಮೂಲಕ ಲಂಚದ ಹಣದ ಬೇಡಿಕೆ ಇಡುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು, ಲಂಚದ ಹಣವನ್ನು ನೀಡಲು ಇಷ್ಟವಿಲ್ಲದ ಕಾರಣ ಭ್ರಷ್ಟಾಚಾರ ನಿಗ್ರಹ ದಳ **ಬೆಂಗಳೂರು ಗ್ರಾಮಾಂತರ ಜಿಲ್ಲಾ** ಠಾಣೆಗೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

ಈ ದೂರಿನನ್ವಯ ದಿನಾಂಕ: 11.06.2020 ರಂದು ನಡೆಸಿದ ಟ್ರ್ಯಾಪ್ ಕಾರ್ಯಾಚರಣೆಯಲ್ಲಿ ಶ್ರೀ. ಎಸ್. ನಂಜುಂಡಸ್ವಾಮಿ, ಎ.ಇ, ಸಕ್ಷನ್ ಆಫೀಸರ್, ಬೆಸ್ಕಾಂ, ಆನೇಕಲ್ ರವರ ಸೂಚನೆಯ ಮೇರೆಗೆ ಶ್ರೀ. ರಾಜೇಶ್ ಎಂ. ಎಸ್, ಮೀಟರ್ ರೀಡರ್, ಬೆಸ್ಕಾಂ ಕಛೇರಿ, ಆನೇಕಲ್ ರವರು ರೂ. 65,000/- ಲಂಚದ ಹಣವನ್ನು ಪಿರ್ಯಾದುದಾರರಿಂದ ಪಡೆದುಕೊಂಡಿದ್ದು, ಬೆಂಗಳೂರು ಗ್ರಾಮಂತರ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು, ಲಂಚದ ಹಣದ ಸಮೇತ ಇಬ್ಬರೂ ಆರೋಪಿತರನ್ನು ವಶಕ್ಕೆ ಪಡೆದು, ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಂಡು ದಿನಾಂಕ: 11.06.2020 ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ಪ್ರಕರಣದ ತನಿಖೆ ಮುಂದುವರೆದಿದೆ.

## ಪರಿಷ್ಕೃತ ದಿನಾಂಕ ಪ್ರಕಟ

**ಬೆಂಗಳೂರು, ಜೂನ್ 12 ( ಕರ್ನಾಟಕ ವಾರ್ತೆ ) :**

ಕರ್ನಾಟಕ ಲೋಕಸೇವಾ ಆಯೋಗ 2020 ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳನ್ನು ಮುಂದೂಡಿದೆ.

ಸದರಿ ಇಲಾಖಾ ಪರೀಕ್ಷೆಗಳ ವೇಳಾಪಟ್ಟಿಯನ್ನು ದಿನಾಂಕ 17-07-2020 ರಿಂದ ದಿನಾಂಕ 08-08-2020 ರವರೆಗೆ ಮೂರು ಹಂತಗಳಲ್ಲಿ ನಡೆಸಲಿದೆ. ಪರಿಷ್ಕೃತ ವೇಳಾಪಟ್ಟಿಯನ್ನು ಆಯೋಗದ ವೆಬ್‌ಸೈಟ್ **http://kpsc.kar.nic.in** ನಲ್ಲಿ ಪ್ರಕಟಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪರಿಹಾರ ನಿಧಿ

**ಬೆಂಗಳೂರು, ಜೂನ್ 12 ( ಕರ್ನಾಟಕ ವಾರ್ತೆ ) :**

ಅದಿತಿ ಸೌತ್ ಜೋನ್ ವತಿಯಿಂದ ಮುಖ್ಯಮಂತ್ರಿಗಳ ಕೋವಿಡ್ 19 ಪರಿಹಾರ ನಿಧಿಗೆ ರೂ.3,02,001 ಗಳ ಚೆಕ್ ನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಇಂದು ಹಸ್ತಾಂತರ ಮಾಡಲಾಯಿತು. ಸಂಸ್ಥೆಯ ಕಾರ್ಯದರ್ಶಿ ಕೆ. ರಾಜೇಂದ್ರ ಹಾಗೂ ಪದಾದಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ

**ಬೆಂಗಳೂರು, ಜೂನ್ 12 ( ಕರ್ನಾಟಕ ವಾರ್ತೆ ) :**

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಯುವ ಸಬಲೀಕರಣ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದರು. ಕನ್ನಡ ಮತ್ತು ಸಂಸ್ಕೃತಿ, ಯುವ ಸಬಲೀಕರಣ ಮತ್ತು ಪ್ರವಾಸೋದ್ಯಮ ಸಚಿವ ಸಿ.ಟಿ. ರವಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ. ಎಂ. ವಿಜಯಭಾಸ್ಕರ್, ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಆಚರಣೆ

**ಬೆಂಗಳೂರು, ಜೂನ್ 12 ( ಕರ್ನಾಟಕ ವಾರ್ತೆ ) :**

ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ-2020ರ ಪ್ರಯುಕ್ತ ಇಂದು ಕಾರ್ಮಿಕ ಇಲಾಖೆಯ ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ನ್ಯಾ.ಸೋಮಶೇಖರ್ ಬಾದಮಿ, ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕಾರ್ಮಿಕ ಇಲಾಖೆಯ ಅಪರ ಆಯುಕ್ತ ಡಾ. ಮಂಜುನಾಥ್ ಅವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾಚರಣೆಯ ಬಗ್ಗೆ ಅರಿವು ಮೂಡಿಸಲು ಬೆಂಗಳೂರು ನಗರದಾದ್ಯಂತ ಆಟೋ ಮೂಲಕ ಪ್ರಚಾರವನ್ನು ಕೈಗೊಳ್ಳಲು ಚಾಲನೆ ನೀಡಲಾಯಿತು.

**ಚಿತ್ರ ಶೀರ್ಷಿಕೆ :**

ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ – 2020 ದಿನಾಚರಣೆಯನ್ನು ಶುಕ್ರವಾರ ಕಾರ್ಮಿಕ ಇಲಾಖೆಯ ಆವರಣದಲ್ಲಿ ಆಚರಿಸಲಾಯಿತು. ನ್ಯಾಯಾಧೀಶರಾದ ಸೋಮಶೇಖರ ಬಾದಾಮಿ, ಕಾರ್ಮಿಕ ಇಲಾಖೆಯ ಅಪರ ಕಾರ್ಮಿಕ ಆಯುಕ್ತರಾದ ಡಾ. ಮಂಜುನಾಥ್ ಸೇರಿದಂತೆ ಇತರ ಅಧಿಕಾರಿಗಳು ಹಾಜರಿದ್ದರು. ಬಾಲಕಾರ್ಮಿಕ ಪದ್ಧತಿ ವಿರುದ್ಧ ಸಾರ್ವಜನಿಕರಿಗೆ ಅರಿವು ಮೂಡಿಸಲು ಆಟೋ ಮೂಲಕ ಪ್ರಚಾರ ನಡೆಸಲಾಯಿತು.

## ಸಚಿವರ ಪ್ರವಾಸ

**ಬೆಂಗಳೂರು, ಜೂನ್ 12 ( ಕರ್ನಾಟಕ ವಾರ್ತೆ ) :**

ವಸತಿ ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಜೂನ್ 15 ರಂದು ದಾವಣಗೆರೆ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನ ಹಿಂದಿರುಗುವರೆಂದು ಪ್ರಕಟಣೆ ತಿಳಿಸಿದೆ.